ಮಾಡಬೇಕು. ಹೇಳಿದ ಮೇಲೆ ನಾನು ಅಧಿಕಾರಿಗಳನ್ನು ಕಳಿಸಿ ಮಾಹಿತಿಯನ್ನು ಪಡೆಯುತ್ತೇವೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಕೋಳಿ ಕೇಳಿ ಮೆಣಸನ್ನು ಅರದಹಾಗೆ ಕಾಳಮರಿಗೌಡರು ಹೆಚ್ಚಿ ಹೆಚ್ಚಿಗೂ ಎದ್ದು ನಿಂತರೆ ನಾನೇನು ಪ್ರಾಣತೆಗೆದುಕೊಳ್ಳಲೇ ಹೇಳಿ.

ಉಪಾಧ್ಯಕ್ಷಣಿಯವರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಉಪಾಧ್ಯಕ್ಷಣಿಯವರು: ಏನೆಂದರೆ 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಉಪಾಧ್ಯಕ್ಷಣಿಯವರು: ಮಾನ್ಯ ವಾಟಾಳ್‌ನಾಗರಾಜ್‌ರವರು ಸೂಚಿಸಿರುವ ತಿದ್ದುಪಡಿಯನ್ನೂ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ ವಿಧೇಯಕ ಅನುಸೂಚಿಯಲ್ಲಿ 1ನೇ ಕ್ರಮಸಂಖ್ಯೆಯ 3ನೇ ಅಂಕಣದಲ್ಲಿ ಪಿರಿಯಾಪಟ್ಟಣ ಹೆಗ್ಗಡದೇವನಕೋಟೆ ಗುಂಡ್ಲುಪೇಟೆ ಎಂಬ ಪದಗಳ ತರುವಾಯ ಚಾಮರಾಜನಗರ ಮತ್ತು ಕೊಳ್ಳೆಗಾಲ ಎಂಬ ಪದಗಳನ್ನು ಸೇರಿಸತಕ್ಕದ್ದು

ಉಪಾಧ್ಯಕ್ಷಣಿಯವರು : ಮಾನ್ಯ ವಾಟಾಳ್‌ನಾಗರಾಜ್‌ರವರೇ ನಿಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುತ್ತೀರಾ?

ಶ್ರೀ ವಾಟಾಳ್‌ನಾಗರಾಜ್ : ನಾನು ಧರಣಿ ಕುಳಿತುಕೊಳ್ಳುತ್ತೇನೆ. ತಿದ್ದುಪಡಿಯ ಬಗ್ಗೆ ಆಶ್ವಾಸನೆ ಬರುವವರೆಗೂ ನಾನು

(ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ಧರಣಿಗೆ ಕುಳಿತರು)

ಉಪಾಧ್ಯಕ್ಷಣಿಯವರು : ಮಾನ್ಯ ಮುಖ್ಯಮಂತ್ರಿಯವರು ಏನೋ ಹೇಳುತ್ತಿದ್ದಾರೆ

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ ಯಾವುದೇ ಪ್ರದೇಶವನ್ನು ಸೇರಿಸುವುದಕ್ಕೆ ಕೆಲವು ಸಕಾರಣಗಳು ಇರಬೇಕಾಗುತ್ತದೆ. ಮೊದಲು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರಸರ್ಕಾರದಿಂದ ನಿರೂಪಣೆ ಮಾಡಿರುವಂತಹ ಪಟ್ಟಿ ಈಗಾಗಲೇ ಇದೆ. ಮತ್ತೊಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ನಮ್ಮ ಸರ್ಕಾರದಿಂದ ಕಳುಹಿಸಿರುವುದು ಅಲ್ಲ, ಈಗಾಗಲೇ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಿಂದ ಅದನ್ನು ರೆಡಿ ಮಾಡಿ ಅದಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಈ ಕೆಲವು ಭಾಗಗಳು ಬೆಳಗಾಂ ಜಿಲ್ಲೆ ಧಾರವಾಡ ಕೂಡ ಇವೆ. ಈ ಪಟ್ಟಿಯನ ನೋಡಿದರೆ ಇದರಲ್ಲಿ ಚಾಮರಾಜನಗರ ಏಕೆ ಸೇರಬಾರದು ಅನ್ನುವಂತಹ ಅಭಿಪ್ರಾಯ ಬರುವುದು ತಪ್ಪಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಈವತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಿಂದ ಪಟ್ಟಿ ಏನು ಹೋಗಿದೆ ಅದನ್ನು ಈ ಮಲೆನಾಡು ಅಭಿವೃದ್ಧಿಗೆ ತರಬೇಕೆಂದು ಇದೆಯಲ್ಲಾ ಆ ಒಂದು ಬೇಸಿಸ್ ಇಟ್ಟುಕೊಳ್ಳಬೇಕು ಅನ್ನುವಂತಹ ದೃಷ್ಟಿಯಿಂದ ನಾವು ಮಾಡಿರುವಂತಹದ್ದು. ಈಗ ತಮ್ಮ ತಾಲ್ಲೂಕು ಸೇರದೇ ಇದ್ದಿದ್ದರೆ ಅದು ನಮ್ಮ ಕಾಲದಲ್ಲಿ ಮಾಡಿರುವಂತಹದ್ದಲ್ಲ ಈಗ ನಮ್ಮ ಕಾಲದಲ್ಲಿ ಸರಿ ಮಾಡಿ ಎಂದು ತಾವು ಹೇಳಬಹುದು. ನಮಗೆ ಉಳಿದಿರತಕ್ಕಂಥ ಒಂದು ದಾರಿ ಅವರು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ